**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಟಿ.ನರಸೀಪುರ**

ದಿನಾಂಕ 20 ನೇ ಫೆಬ್ರವರಿ 2026

**ಸಿ.ಸಿ.442/2026**

ಪಿರ್ಯಾದುದಾರರುಃ ರಾಜ್ಯದ ಪರ ಬನ್ನೂರು ಪೊಲೀಸರು

ವಿರುದ್ಧ

ಆರೋಪಿಃ ಸಿದ್ದು ಬಿನ್ ಲೇಟ್ ರಾಚೇಗೌಡ, 52 ವರ್ಷ,
ವಾಸಃ ಕಗ್ಗಲೀಪುರ ಗ್ರಾಮ,
ಸೋಸಲೆ ಹೋಬಳಿ, ಟಿ ನರಸೀಪುರ ತಾಲ್ಲೂಕು,
ಮೈಸೂರು ಜಿಲ್ಲೆ.

**ಆರೋಪಣೆ**

**ಶ್ರೀ ಸಚಿನ್ ಹೆಚ್.ಆರ್, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಟಿ.ನರಸೀಪುರ, ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಕೆಳಕಂಡಂತೆ ಆರೋಪಣೆಯನ್ನು ಮಾಡುತ್ತೇನೆ.**

ದಿನಾಂಕ 31.01.2026 ರಂದು ಸಂಜೆ 5.45 ಗಂಟೆ ಸಮಯದಲ್ಲಿ ಬನ್ನೂರು ಠಾಣಾ ವ್ಯಾಪ್ತಿಯ ಜೆ.ಜೆ ಗ್ರಾಮದಿಂದ ಕಗ್ಗಲೀಪುರ ಗ್ರಾಮಕ್ಕೆ ಹೋಗುವ ರಸೆಯಲ್ಲಿರುವ ಪಶ್ಚಿಮದ ಅಂಚಿನಲ್ಲಿ ಆರೋಪಿಯಾದ ನೀವು ನಿಮ್ಮ ಚಿಲ್ಲರೆ ಅಂಗಡಿಯ ಮುಂಭಾಗ ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಪರವಾನಗಿ ಇಲ್ಲದೆ ಸಾರ್ವಜನಿಕರಿಗೆ ಮದ್ಯ ಸೇವನೆ ಮಾಡಲು ಸಹಾಯ ಮಾಡುತ್ತಾ ಸ್ಥಳಾವಕಾಶ ಮಾಡಿಕೊಟ್ಟಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆಯನ್ನು ಉಲ್ಲಂಘಿಸಿದ್ದು ಕಲಂ.32(3) ರನ್ವಯ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

**(ಮೇಲ್ಕಂಡ ಆರೋಪಗಳ ಬಗ್ಗೆ ಆರೋಪಿಯಾದ ನೀವು ಈ ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದ್ದು ಎಂದು ನಾನು ನಿರ್ದೇಶಿಸುತ್ತೇನೆ.)**

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಟಿ.ನರಸೀಪುರ.**

## ಆರೋಪಿಯ ಹೇಳಿಕೆ

ಪ್ರಶ್ನೆ-1 ಈಗ ಓದಿ ಹೇಳಿದ ಆರೋಪಣೆಯನ್ನು ಅರ್ಥ ಮಾಡಿಕೊಂಡಿರಾ ?

ಉತ್ತರಃ

ಪ್ರಶ್ನೆ-2 ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆ ಆಗಬೇಕೆನ್ನುವಿರಾ?
ಉತ್ತರಃ

**(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದು ಕೊಂಡಿದ್ದು ಅವು ಸರಿಯಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)**

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಟಿ.ನರಸೀಪುರ.**

**ಆರೋಪಿಯ ಸಹಿಃ**